VIJAYAKUMAR KANNUR
Digitally signed by VIJAYAKUMAR KANNUR
Date: 2026.03.13 17:12:35 +0530



**ಪ್ರಧಾನ ಹಿರಿಯ ದಿವಾಣಿ ನ್ಯಾಯಧೀಶರು ಹಾಗೂ ಜೆ.ಎಂ.ಎಫ್.ಸಿ. ಇವರ ನ್ಯಾಯಾಲಯ, ಮುಧೋಳ**

**ಸಾಕ್ಷಿಗೆ ಇಂದು ದಿನಾಂಕ 13.03.2026 ರಂದು ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ 1 ರವರ ಪರ ಶ್ರೀ ಎಸ್ ಟಿ ಬಿ ವಕೀಲರಿಂದ :**

ನನ್ನ ತಂದೆಯ ಹೆಸರು ಗದಿಗೆಪ್ಪ, ತಾಯಿ ಹೆಸರು ಪಾರ್ವತಿ. ನನಗೆ ಇಬ್ಬರು ಸಹೋದರಿಯವರು ಮತ್ತು ಇಬ್ಬರು ಸಹೋದರರು. ಅವರೇಂದರೆ ಪಾಂಡಪ್ಪ ಮತ್ತು ಹಣಮಂತ ಎಂಬುವವರು. ಹಣಮಂತ ಜಂಬಗಿ ಎಂಬುವವರು ಪಾಂಡಪ್ಪ ನನ್ನು ದತ್ತಕಕ್ಕೆ ಪಡೆದುಕೊಂಡಿರುವರು ಎಂದರೆ ಸರಿ. ದಾವಾ ಆಸ್ತಿ ಹಣಮಂತನಿಗೆ ಸಂಬಂಧಪಟ್ಟಿರುವುದು ಎಂದರೆ ಸರಿಯಲ್ಲ. ಅದು ನನ್ನ ಅಜ್ಜನಿಗೆ ಸಂಬಂಧಪಟ್ಟಿರುವುದಾಗಿ ಎಂದು ಸಾಕ್ಷಿ ಉತ್ತರಿಸುವರು. ಹಣಮಂತ ಮತ್ತು ಸತ್ಯವ್ವ ಕೂಡಿಕೊಂಡು ಪಾಂಡಪ್ಪ ನನ್ನು ದತ್ತಕಕ್ಕೆ ಪಡೆದುಕೊಂಡಿರುವರು ಎಂದರೆ ಸರಿ.

2. ದಾವಾ ಆಸ್ತಿ ಹಣಮಂತನಿಗೆ ಹೇಗೆ ಬಂದಿರುವುದು ಎಂದು ದಾಖಲೆಗಳನ್ನು ಹಾಜರು ಪಡಿಸಿರುವುದಿಲ್ಲ ಎಂದರೆ ಸಾಕ್ಷಿ ಅದು ಹಿರಿಯರ ಆಸ್ತಿಯಾಗಿರುವುದು ಎಂದು ಸಾಕ್ಷಿ ಉತ್ತರಿಸುವರು. ಹಣಮಂತ 1983 ರಲ್ಲಿ ಮೃತ ಪಟ್ಟಿರುವನು ಎಂದರೆ ಸರಿ. ಸತ್ಯವ್ವ 1981 ರಲ್ಲಿ ಮೃತ ಪಟ್ಟಿರುವಳು ಎಂದರೆ ಸರಿ. ಪ್ರತಿವಾದಿ 1 ಈ ದತ್ತಕ ತೆಗೆದುಕೊಂಡಾಗಿನಿಂದಲೂ ಆತನೇ ಮಾಲೀಕನಾಗಿರುವನು ಎಂದರೆ ಸರಿಯಲ್ಲ. ಈ ದತ್ತಕ ಪತ್ರ 1979 ರಲ್ಲಿ ಮುಧೋಳದ ಉಪನೊಂದಣಿ ಕಚೇರಿಯಲ್ಲಿ ನೊಂದಣಿಯಾಗಿರುವುದು ಎಂದರೆ ಅದರ ಬಗ್ಗೆ ತನಗೆ ಮಾಹಿತಿ ಇರುವುದಿಲ್ಲಎಂದು ಸಾಕ್ಷಿ ಉತ್ತರಿಸುವರು. ದಾವಾ ಆಸ್ತಿಯಲ್ಲಿ ನನಗೆ 1/5 ಹಿಸ್ಸೆ ಇರುವುದಾಗಿ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಗೆ ಸಂಪೂರ್ಣವಾಗಿ ಪ್ರತಿವಾದಿ 1 ರವರಿಗೆ ಸಂಬಂಧಪಟ್ಟಿರುವುದು ಎಂದರೆ ಸರಿಯಲ್ಲ. 1983 ರಲ್ಲಿ ಹಣಮಂತ ಮೃತ ಪಟ್ಟ ನಂತರ ಪ್ರತಿವಾದಿ 1 ರವರೇ ಈ ಆಸ್ತಿಯ ಮಾಲೀಕ

ಮತ್ತು ಕಬ್ಜೆದಾರನಾಗಿರುವನು ಎಂದರೆ ಸರಿಯಲ್ಲ.

**ಮರುವಿಚಾರಣೆಃ** ಇರುವುದಿಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು. )

ಓ . ಹೇ. ಕೆ . ಸರಿ ಅದೆ .

ಸಾಕ್ಷಿಯ ಸಹಿ

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಜೆ.ಎಂ.ಎಫ್.ಸಿ., ಮುಧೋಳ